# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. B93/ 35989/ 2016-17೮೪೫೨ ನಿಗಮ ಕಾರ್ಯಾಲಯ, ಕಾವೇರಿ ಭವನ,

ಬೆಂಗಳೂರು. ದಿನಾಂಕ: 03-04-2017

## ಸುತ್ತೋಲೆ

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ / ವಿಸಕಂಗಳ ನೌಕರರು / ಅಧಿಕಾರಿಗಳು ಅವರ ಖಾಯಂ ವಿಶ್ರಾಂತಿ ವೇತನ ಸಂಖ್ಯೆ (PPAN) ಖಾತೆಯಲ್ಲಿ ಜಮಾ ಇರುವ ಪಿಂಚಣಿ ವಂತಿಗೆಯ ವಿವರಗಳನ್ನು ಪಡೆದು ಪರಿಶೀಲಿಸಿಕೊಳ್ಳುವ ಬಗ್ಗೆ.

ಉಲ್ಲೇಖ
೧. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 4/ಪೀಇಟಿ 2005 ದಿನಾಂಕ 31-03-2003
೨. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ.14/ 4977/2005-06 ದಿನಾಂಕ 05-07-2007
೩. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ 4977/2005-06 ದಿನಾಂಕ 21-08-2007
೪. ಈ ಕಛೇರಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ//ಬಿ. B93/ 35989/ 2016-17 ದಿನಾಂಕ 21-02-2017
೫. ಈ ಕಛೇರಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ//ಬಿ. B93/ 35989/ 2016-17 ದಿನಾಂಕ 03-03-2017

*****

ಉಲ್ಲೇಖ 4 ಮತ್ತು 5 ರಲ್ಲಿರುವ ಈ ಕಛೇರಿ ಸುತ್ತೋಲೆಗಳಲ್ಲಿ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ / ವಿಸಕಂಗಳ ನೌಕರರು / ಅಧಿಕಾರಿಗಳು ಅವರ ಖಾಯಂ ವಿಶ್ರಾಂತಿ ವೇತನ ಸಂಖ್ಯೆ (PPAN) ಖಾತೆಯಲ್ಲಿ ಜಮಾ

BECD 3/4/17 AEE-4/AE-1 3/4/2017

ಇರುವ ಪಿಂಚಣಿ ವಂತಿಗೆಯ ವಿವರಗಳನ್ನು ತಂತ್ರಾಂಶದಿಂದ ಪಡೆದು ಅದರ ನಿಖರತೆಯನ್ನು ಪರಿಶೀಲಿಸಿಕೊಳ್ಳುವ ಬಗ್ಗೆ ಮತ್ತು ವ್ಯತ್ಯಾಸಗಳೇನಾದರೂ ಕಂಡುಬಂದಲ್ಲಿ ಅದರ ವಿವರಗಳನ್ನೊಳಗೊಂಡ ಮನವಿ ಪತ್ರವನ್ನು ಸಮುಚಿತ ಮಾರ್ಗದಲ್ಲಿ ಲೆಕ್ಕ ಘಟಕದ ಷರಾದೊಂದಿಗೆ ಕೆಇಎನ್‌ಡಿಸಿಪಿಎಸ್ ಘಟಕದ ಗಮನಕ್ಕೆ ತಂದಲ್ಲಿ ಅದನ್ನು ಪರಿಶೀಲಿಸಿ ಅಗತ್ಯವಿದ್ದರೆ ಸರಿಪಡಿಸಲಾಗುವುದು ಎಂದೂ ಸಹ ತಿಳಿಸಲಾಗಿತ್ತು.

ಅಂತರ್ಜಾಲದಲ್ಲಿ ಪಿಂಚಣಿ ವಂತಿಗೆ ವಿವರಗಳನ್ನು ಪರಿಶೀಲಿಸಿದ ನೌಕರರು ಅವರು ಗಮನಿಸಿದ ವ್ಯತ್ಯಾಸವನ್ನು ಸರಿಪಡಿಸಲು ಕೋರಿ ಅವರು ಕಾರ್ಯನಿರ್ವಹಿಸುತ್ತಿರುವ ಲೆಕ್ಕ ಘಟಕಕ್ಕೆ ಸಲ್ಲಿಸಲಾದ ಮನವಿಪತ್ರವನ್ನು ಹಲವಾರು ಲೆಕ್ಕ ಘಟಕಗಳು ಏನನ್ನೂ ಪರಿಶೀಲಿಸದೆ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಸಲ್ಲಿಸಿರುತ್ತಾರೆ. **ಲೆಕ್ಕ ಘಟಕಗಳಲ್ಲಿ ಸಂಬಂಧಿಸಿದ ಅವಧಿಗೆ ನಿರ್ವಹಣೆ ಮಾಡಿರುವ ಮೂಲ ದಾಖಲಾತಿಗಳೊಂದಿಗೆ ಅರ್ಜಿಗಳನ್ನು ಪರಿಶೀಲಿಸುವುದು ಲೆಕ್ಕ ಘಟಕಗಳ ಆದ್ಯ ಕರ್ತವ್ಯವಾಗಿರುತ್ತದೆ.** ಕೆಇಎನ್‌ಡಿಸಿಪಿಎಸ್ ಘಟಕದಲ್ಲಿ ನೇರವಾಗಿ / ಸಮುಚಿತ ಮಾರ್ಗದಲ್ಲಿ ಒಟ್ಟು 563 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ 148 ಅರ್ಜಿಗಳು ಅನುಬಂಧ – 1 ಕ್ಕೆ ಸಂಬಂಧಿಸಿರುತ್ತದೆ. ಉಳಿದ 415 ಅರ್ಜಿಗಳು ಪಿಂಚಣಿ ವಂತಿಗೆಗೆ ಸಂಬಂಧಿಸಿರುತ್ತದೆ. ಲೆಕ್ಕ ಘಟಕಗಳಲ್ಲಿ ಸದರಿ ಅರ್ಜಿಗಳ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. .

1. ನೌಕರರ ಅರ್ಜಿಯಲ್ಲಿ ಪಿಂಚಣಿ ವಂತಿಗೆಯು ಕಡಿಮೆಯಾಗಿದೆ ಎಂದು ತಿಳಿಸಿದ್ದರೆ, ಲೆಕ್ಕ ಘಟಕವು ಸಂಬಂಧಿತ ತಿಂಗಳಿನ Scale Register ಮತ್ತು ಅನುಬಂಧ – 4 ನ್ನು ಪರಿಶೀಲಿಸಿ ವಸ್ತುಸ್ಥಿತಿಯನ್ನು ಅರ್ಜಿಯಲ್ಲಿ ನಮೂದಿಸಬೇಕು. ಒಂದು ವೇಳೆ ಅನುಬಂಧ – 4 ರಲ್ಲಿ ನಮೂದಿಸಿರುವ ಮೊತ್ತವು ಸಂಬಳದಿಂದ ವಾಸ್ತವಿಕವಾಗಿ ಮುರಿದುಕೊಂಡಿರುವ ಮೊತ್ತಕ್ಕಿಂತ ಕಡಿಮೆ ಇದ್ದಲ್ಲಿ ಲೆಕ್ಕ ಘಟಕದ ಷರಾದೊಂದಿಗೆ ವ್ಯತ್ಯಾಸದ ಮೊತ್ತವನ್ನು ನಿಗಮ ಕಾರ್ಯಾಲಯದ ಮೂಲಕ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ನಿಧಿ ವರ್ಗಾವಣೆ ಮಾಡಲು ಕ್ರಮ ವಹಿಸತಕ್ಕದ್ದು.

2. ಒಂದು ವೇಳೆ ಅನುಬಂಧ – 4 ರಲ್ಲಿ ನಮೂದಿಸಿರುವ ಮೊತ್ತವು ಸಂಬಳದಿಂದ ವಾಸ್ತವಿಕವಾಗಿ ಮುರಿದುಕೊಂಡಿರುವ ಮೊತ್ತಕ್ಕೆ ಹೊಂದಾಣಿಕೆಯಾಗುತ್ತಿದ್ದು ತಂತ್ರಾಂಶದಲ್ಲಿ ಪಿಂಚಣಿ ವಂತಿಗೆ ಮೊತ್ತವು ಕಡಿಮೆ ಇದ್ದಲ್ಲಿ ಲೆಕ್ಕ ಘಟಕದ ಷರಾದೊಂದಿಗೆ ವ್ಯತ್ಯಾಸವನ್ನು ಸರಿಪಡಿಸಲು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸತಕ್ಕದ್ದು.

3. ಕೆಇಎನ್‌ಡಿಸಿಪಿಎಸ್ ಘಟಕದಲ್ಲಿ ಗಮನಿಸಿರುವಂತೆ ಯಾವುದೆ ಒಂದು ತಿಂಗಳಿನ ಪಿಂಚಣಿ ವಂತಿಗೆಯನ್ನು ಲೆಕ್ಕ ಘಟಕಗಳು ಪಾವತಿಸದಿದ್ದರೆ, ಆ ತಿಂಗಳಿನ ನಂತರದ ತಿಂಗಳಿನಲ್ಲಿ ಎರಡೂ ತಿಂಗಳ ವಂತಿಗೆಯನ್ನು ಪಾವತಿಸಲಾಗಿರುತ್ತದೆ. ಅಂತಹ ಪ್ರಕರಣಗಳಲ್ಲಿ ನಂತರದ ತಿಂಗಳಿನಲ್ಲಿ ಪಿಂಚಣಿ ವಂತಿಗೆಯನ್ನು ತೋರಿಸಿ ಹಿಂದಿನ ತಿಂಗಳ ಪಿಂಚಣಿ ವಂತಿಗೆಯನ್ನು ತಿಂಗಳ ಬಾಕಿ ಕಾಲಂನಲ್ಲಿ ತೋರಿಸಲಾಗಿರುತ್ತದೆ. ನೌಕರರು ತಂತ್ರಾಂಶದಲ್ಲಿ ಪಿಂಚಣಿ ವಂತಿಗೆ ವಿವರಗಳನ್ನು ವೀಕ್ಷಿಸುವಾಗ ಒಂದು ತಿಂಗಳ ಎದುರಿನಲ್ಲಿ ಪಿಂಚಣಿ ವಂತಿಗೆ ಜಾಗ ಖಾಲಿ ಇರುವುದನ್ನು ಮಾತ್ರ ನೋಡಿ ಮುಂದಿನ ತಿಂಗಳ ಬಾಕಿ ಕಾಲಂನಲ್ಲಿ ನಮೂದಿಸಿರುವುದನ್ನು ಪರಿಗಣಿಸದೆ ಪಿಂಚಣಿ ವಂತಿಗೆ ಸಂದಾಯವಾಗಿಲ್ಲವೆಂದು ಅರ್ಜಿ ಸಲ್ಲಿಸುತ್ತಾರೆ. ಅಂತಹ ಅರ್ಜಿಗಳನ್ನು ಪರಿಶೀಲಿಸುವಾಗ ಬಾಕಿ ಕಾಲಂನಲ್ಲಿ ನಮೂದಿಸಿರುವುದನ್ನು ಲೆಕ್ಕ ಘಟಕಗಳು ಪರಿಗಣಿಸಿ ಅರ್ಜಿಯನ್ನು ತಮ್ಮ ಹಂತದಲ್ಲೇ ಇತ್ಯರ್ಥಗೊಳಿಸಬೇಕಾಗುತ್ತದೆ.

4. ಅರ್ಜಿದಾರ ನೌಕರರು ಸಲ್ಲಿಸಿರುವ ಅರ್ಜಿಯಲ್ಲಿನ ವಂತಿಗೆಯ ವ್ಯತ್ಯಾಸ ಅವರು ಬೇರೆ ಲೆಕ್ಕ ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಗೆ ಸಂಬಂಧಿಸಿದ್ದರೆ, ಅಂತಹ ಪ್ರಕರಣಗಳಲ್ಲಿ ಹಾಲಿ ಲೆಕ್ಕ ಘಟಕದಲ್ಲಿನ ಅವಧಿಯ ವ್ಯತ್ಯಾಸಕ್ಕೆ ಮೇಲಿನಂತೆ ಕ್ರಮ ಕೈಗೊಂಡು ತಮ್ಮ ಷರಾದೊಂದಿಗೆ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ರವಾನಿಸಿ ಸಂಬಂಧಿಸಿದ ಇತರೆ ಲೆಕ್ಕ ಘಟಕಗಳಿಗೆ ಅರ್ಜಿ ಮತ್ತು ಲಗತ್ತುಗಳ ಪ್ರತಿಯನ್ನು ಕಳುಹಿಸಿ ಅಗತ್ಯ ಕ್ರಮ ಕೈಗೊಳ್ಳಲು ಕೋರುವುದು. ಈ ರೀತಿ ಕಳುಹಿಸಲಾದ ಅರ್ಜಿಗಳ ಮಾಹಿತಿಯನ್ನು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ನೀಡುವುದು. ಇಂತಹ ಅರ್ಜಿಗಳನ್ನು ಸ್ವೀಕರಿಸುವ ಲೆಕ್ಕ ಘಟಕಗಳು ಈ ಮೇಲೆ ತಿಳಿಸಿರುವಂತೆ ಅಗತ್ಯ ಕ್ರಮವನ್ನು ಆದ್ಯತೆಯ ಮೇಲೆ ಕೈಗೊಳ್ಳುವುದು.

5. ಅನುಬಂಧ – 1 ರಲ್ಲಿರುವ ವ್ಯತ್ಯಾಸಗಳನ್ನು ಸರಿಪಡಿಸುವ ಬಗ್ಗೆ ಪ್ರತ್ಯೇಕ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ನಾಮ ನಿರ್ದೇಶನಗಳನ್ನು ಈಗ ಬದಲಾಯಿಸಬೇಕಿದ್ದರೆ, ಹೊಸ ಅನುಬಂಧ – 1 ನ್ನು ನಿಗದಿತ ನಮೂನೆಯಲ್ಲಿ ನೌಕರರಿಂದ ಪಡೆದುಕೊಂಡು ದೃಢೀಕರಿಸಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸುವುದು.

ಈ ಮೇಲಿನ ಹಿನ್ನಲೆಯಲ್ಲಿ, ಲೆಕ್ಕ ಘಟಕಗಳಿಂದ ಕೆಇಎನ್‌ಡಿಸಿಪಿಎಸ್ ಘಟಕದಲ್ಲಿ ಸ್ವೀಕರಿಸಲಾಗಿರುವ ನೌಕರರ ಎಲ್ಲಾ ಅರ್ಜಿಗಳನ್ನು ಸಂಬಂಧಿಸಿದ ಲೆಕ್ಕ ಘಟಕಗಳಿಗೆ ಹಿಂದಿರುಗಿಸಲಾಗುವುದು. ಅಂತಹ ಎಲ್ಲಾ ಅರ್ಜಿಗಳನ್ನೂ ಲೆಕ್ಕ ಘಟಕಗಳು ಅದರ ಮೂಲ ದಾಖಲಾತಿಗಳೊಂದಿಗೆ ಮೇಲೆ ತಿಳಿಸಿದ ರೀತಿಯಲ್ಲಿ ಪರಿಶೀಲಿಸಿ, ಕೆಇಎನ್‌ಡಿಸಿಪಿಎಸ್ ಘಟಕದಲ್ಲಿ ಕ್ರಮ ತೆಗೆದುಕೊಳ್ಳಬೇಕಾದ ಅರ್ಜಿಗಳನ್ನು ಮಾತ್ರ ಸ್ಪಷ್ಟ ಷರಾದೊಂದಿಗೆ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸುವುದು. ಅರ್ಜಿಗಳ ಪೂರ್ವ ಪರಿಶೀಲನೆ ಮಾಡದೆ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕಳುಹಿಸಿದ್ಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಲೆಕ್ಕ ಘಟಕಗಳ ಅಧಿಕಾರಿ / ನೌಕರರ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು.

ನಿರ್ದೇಶಕರು (ಆ ಮತ್ತು ಮಾ.ಸಂ)

ಪ್ರತಿಗಳು:

೧. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ವಿಸಕಂಗಳು,
೨. ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಲ್ಲಾ ವಿಸಕಂಗಳು,
೩. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
೪. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
೫. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ. ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
೬. **ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ http:/www.kptcl.com / eprasarana** ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅ.ಅ (ಐ.ಟಿ ಮತ್ತು ಎಂ ಐ ಎಸ್) ರವರು ವೆಬ್ ಸೈಟ್ ನಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡುವಂತೆ ಕೋರಲಾಗಿದೆ.
೭. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು
೮. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೯. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೧೦. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು
೧೧. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು

ಪ್ರತಿಗಳು:

೧. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ವಿಸಕಂಗಳು,

೨. ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಲ್ಲಾ ವಿಸಕಂಗಳು,

೩. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೪. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೫. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ. ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ http:/www.kptcl.com / eprasarana** ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅ.ಅ (ಐ.ಟಿ ಮತ್ತು ಎಂ ಐ ಎಸ್) ರವರು ವೆಬ್ ಸೈಟ್ ನಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡುವಂತೆ ಕೋರಲಾಗಿದೆ.

೬. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು

೭. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು

೮. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು

೯. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು

೧೦. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು